# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/ /23-24
E-35869

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 3.10.23

**ಕಛೇರಿ ಆದೇಶ**

ವಿಷಯ: ಶ್ರೀಮತಿ ಪಿ. ಶಾನು, ಪ್ರಭಾರ ಕಾರ್ಯಪಾಲಕ ಅಭಿಯಂತರರು ಇವರನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 233 ಎಂ.ಎನ್.ಯು 2021, ದಿನಾಂಕ: 06-07-2021
2) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಿಯೋಜನಾ ನೀತಿ ಅಧಿಸೂಚನೆ ಸಂಖ್ಯೆ: ನಅಇ 142 ಎಂ.ಎನ್.ಯು 2021, ದಿನಾಂಕ: 07-01-2022
3) ಸಂಖ್ಯೆ: ಬಿ12(6)ಪಿಆರ್/56/23-24, ದಿನಾಂಕ: 05-07-2023ರ ಸುತ್ತೋಲೆ

-----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಪಿ. ಶಾನು, ಪ್ರಭಾರ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಲಾಖೆಯಿಂದ ಎರವಲು ಸೇವೆಯ ಮೇಲೆ ಉಲ್ಲೇಖ-(1)ರ ಅಧಿಸೂಚನೆಯಂತೆ 02 ವರ್ಷಗಳ ಅವಧಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಯೋಜನೆಗೊಂಡು, ಉಪ ನಿರ್ದೇಶಕರು (ನಗರಯೋಜನೆ-ಉತ್ತರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ಉಲ್ಲೇಖ-(2)ರ ಅಧಿಸೂಚನೆಯಂತೆ ನಿಯೋಜನಾ ಅವಧಿಯನ್ನು ಪೂರೈಸಿರುವ ಹಿನ್ನಲೆಯಲ್ಲಿ, ಸದರಿಯವರ ಸೇವೆಯನ್ನು ಕೂಡಲೇ ಜಾರಿಗೆ ಬರುವಂತೆ ಮಾತೃ ಇಲಾಖೆಯಾದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಲಾಖೆಗೆ ಹಿಂದಿರುಗಿಸಿ ಆದೇಶಿಸಿದೆ. ಸದರಿಯವರನ್ನು ದಿನಾಂಕ: 04-10-2023ರ ಅಪರಾಹ್ನದಿಂದ ಅನ್ವಯವಾಗುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸೇವೆಯಿಂದ ಹಾಗೂ ಹಾಲಿ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳಿಂದ ಬಿಡುಗಡೆಗೊಳಿಸಿ ಆದೇಶಿಸಿದೆ.

**ಷರತ್ತುಗಳು:-**

1. ಸದರಿ ಅಭಿಯಂತರರು ನಗರ ಪಾಲಿಕೆಯ ಸೇವಾ ಅವಧಿಯಲ್ಲಿ ನಗರ ಪಾಲಿಕೆಗೆ ಯಾವುದೇ ಆರ್ಥಿಕ ಬಾಕಿಯನ್ನು ಉಳಿಸಿಕೊಂಡಿದ್ದಲ್ಲಿ ಸದರಿಯವರಿಂದ ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ.
2. ಸದರಿ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ನಿಯಮಾನುಸಾರ ಕ್ರಮಜರುಗಿಸುವ ಷರತ್ತಿಗೊಳಪಡಿಸಿದೆ.
3. ಪಾಲಿಕೆಯ ಹಿಂದಿನ ವರ್ಷಗಳ ಆಡಿಟ್ ವರದಿಗಳಲ್ಲಿ ಯಾವುದೇ ಆರ್ಥಿಕ ಬಾಕಿಯನ್ನು ಸದರಿಯವರಿಂದ ವಸೂಲಾತಿ ಮಾಡಲು ಸೂಚಿಸಿದಲ್ಲಿ, ಅಂತಹ ಮೊತ್ತವನ್ನು ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡುವ ಷರತ್ತು ವಿಧಿಸಿದೆ.
4. ಸದರಿಅಭಿಯಂತರರು ನಗರ ಪಾಲಿಕೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದಲ್ಲಿ ಕೂಡಲೇ ತೆರವುಗೊಳಿಸುವ ಷರತ್ತಿಗೊಳಪಡಿಸಿದೆ.
5. ವಾಕಿ ಟಾಕಿ, ಮೊಬೈಲ್ ಫೋನ್, ಸಿಮ್‌ಕಾರ್ಡ್, ಹೆಲ್ತ್‌ಕಾರ್ಡ್, ಗುರುತಿನ ಚೀಟಿ (Identity card) ಹಾಗೂ ಲ್ಯಾಪ್‌ಟಾಪ್‌ಗಳನ್ನು ಪಾಲಿಕೆಯಿಂದ ಪಡೆದಿದ್ದಲ್ಲಿ ಇವುಗಳನ್ನು ಪಾಲಿಕೆಗೆ ಹಿಂದಿರುಗಿಸುವ ಷರತ್ತಿಗೊಳಪಡಿಸಿದೆ.

ಮೇಲ್ಕಂಡ ಆದೇಶದನ್ವಯ ಹಾಗೂ ಮಾನ್ಯ ಮುಖ್ಯ ಆಯುಕ್ತರು ರವರ ಉಲ್ಲೇಖ-(2)ರ ಸುತ್ತೋಲೆಯನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವುದು.

(ಸಹಿ) 3/10

(ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ.
: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01 ರವರಿಗೆ ಕಳುಹಿಸಿದೆ.
: ಅಪರ ನಿರ್ದೇಶಕರು (ನಗರಯೋಜನೆ) ರವರಿಗೆ ಕಳುಹಿಸಿದೆ.
: ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ) ರವರಿಗೆ ಕಳುಹಿಸಿದೆ.
: ನಿರ್ದೇಶಕರು, ಮಾಹಿತಿ ತಂತ್ರಜ್ಞಾನ / ಮುಖ್ಯ ಮಾಹಿತಿ ಅಧಿಕಾರಿ ರವರಿಗೆ ಕಳುಹಿಸುತ್ತಾ, ಸದರಿಯವರು ಮೊಬೈಲ್ ಫೋನ್, ಮತ್ತು ಸಿಮ್‌ಕಾರ್ಡ್ ಅನ್ನು ಪಾಲಿಕೆಗೆ ಹಿಂದಿರುಗಿಸಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು.
: ಮು.ಲೆ.ಅ / ಮು.ಲೆ.ಪ ರವರಿಗೆ ರವರಿಗೆ /ಉ.ನಿ (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ.
: ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.